**ಕರ್ನಾಟಕ ಸರ್ಕಾರ**

**ವಿಶೇಷ ಜಿಲ್ಲಾಧಿಕಾರಿ, ಭೂಸ್ವಾಧೀನ, ಪುನರ್ವಸತಿ ಮತ್ತು ಪುನರ್‌ನಿರ್ಮಾಣ, ಕೃಷ್ಣಾ ಮೇಲ್ದಂಡೆ ಯೋಜನೆಯವರ ಕಾರ್ಯಾಲಯ, ಜಮಖಂಡಿ 587301**

---

ವಿಷಯ: ವಿಜಯಪುರ ಜಿಲ್ಲೆಯ ವಿಜಯಪುರ ತಾಲೂಕಿನ ಶಿವಣಗಿ ಗ್ರಾಮದ ಜಮೀನುಗಳಲ್ಲಿ ಚಿಮ್ಮಲಗಿ ಏತ ನೀರಾವರಿಯ ನಾಗಠಾಣಾ ಶಾಖಾ ಕಾಲುವೆಯ ಕಿ.ಮೀ.30.000 ರಿಂದ 32.100 ರವರೆಗಿನ ನಿರ್ಮಾಣಕ್ಕಾಗಿ ಭೂಸ್ವಾಧೀನ ಪಡಿಸಿಕೊಳ್ಳುತ್ತಿರುವ ಪ್ರಕರಣದಲ್ಲಿ ಜಮೀನು ಕಳೆದುಕೊಳ್ಳುವ ಬಾಧಿತ ಕುಟುಂಬಕ್ಕೆ ಭೂಸ್ವಾಧೀನಕಾಯ್ದೆ ಕಲಂ 31 ರಡಿಯಲ್ಲಿ ಪುನರ್ವಸತಿ ಮತ್ತು ಪುನರ್‌ವ್ಯವಸ್ಥೆ ಪ್ರಯೋಜನಗಳಿಗೆ ರಚಿಸಿದ ಐತೀರ್ಪಿಗೆ ಮಂಜೂರಾತಿ ನೀಡುವ ಕುರಿತು.

ಓದಲಾಗಿದೆ:
1) ಭೂಸ್ವಾಧೀನಕಾಯ್ದೆ 2013ರ ಕಲಂ 11(1)ಕ್ಕೆ ಅನುಸಾರವಾಗಿ ಹೊರಡಿಸಲಾಗಿರುವ ಅಧಿಸೂಚನೆ ದಿನಾಂಕ:25-01-2017.
2) ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಮತ್ತು ನ್ಯಾಯೋಚಿತ ಪರಿಹಾರಕ್ಕೆ ಹಕ್ಕು, ಪುನರ್ವಸತಿ ಮತ್ತು ಪುನರ್‌ವ್ಯವಸ್ಥೆ ಅಧಿನಿಯಮ 2013ರ ಕಲಂ 16(6)ರಕುರಿತು.
3) ಮಹಾ ವ್ಯವಸ್ಥಾಪಕರು, ಪು ಮತ್ತು ಪು ಕೃಮೇಯೋ:ನವನಗರ, ಬಾಗಲಕೋಟರವರ ಕಲಂ 17(2) ರಡಿ ಶಿಫಾರಸ್ಸುಗಳ ದಿನಾಂಕ: -04-2016
4) ಆಯುಕ್ತರು, ಪು ಮತ್ತು ಪು ಮತ್ತು ಭೂಸ್ವಾಧೀನ, ಕೃಮೇಯೋ: ನವನಗರ, ಬಾಗಲಕೋಟರವರ ಕಲಂ 18 ರಡಿ ಪುನರ್ವಸತಿ ಪುನರ್‌ವ್ಯವಸ್ಥೆ ಕರಡು ಅನುಮೋದನೆ ದಿನಾಂಕ:26-04-2016ರಂದು ನೀಡಿದ್ದು, ಸರ್ಕಾರದ ವೆಬ್ ಸೈಟದಲ್ಲಿ ಪ್ರಸಿದ್ಧಿಪಡಿಸಲಾಗಿದೆ.
5) ಭೂಸ್ವಾಧೀನಕಾಯ್ದೆ ಕಲಂ 19(2) ರಡಿ ಹೊರಡಿಸಲಾದ ಅಧಿಸೂಚನೆ ಘೋಷಣೆ ದಿನಾಂಕ03-08-2016.
6) ಭೂಸ್ವಾಧೀನಕಾಯ್ದೆ ಕಲಂ 32 ರ ರನುಸಾರ ಬಾಧಿತ ಕುಟುಂಬಗಳಿಗೆ ಪುನರ್ವಸತಿ ಮತ್ತು ಪುನರ್‌ವ್ಯವಸ್ಥೆ ಐತೀರ್ಪು ಘೋಷಣೆ.
7) ಮಾನ್ಯ ಮಹಾ ವ್ಯವಸ್ಥಾಪಕರು, ಭೂಸ್ವಾಧೀನ,ಕೃಮೇಯೋ:ನವನಗರ, ಬಾಗಲಕೋಟರವರ ಪತ್ರ ಸಂ:ಕಂಇ:22:ಪುನರ್ವಸತಿ/201 ದಿನಾಂಕ:22-02-2016.
8) ವಿಶೇಷ ಭೂಸ್ವಾಧೀನಾಧಿಕಾರಿಗಳು, ಕೃಮೇಯೋ:ಇಂಡಿ ಇವರ ಪತ್ರ ಸಂ:ಎಲ್.ಎ.ಕ್ಯೂ/ಎಸ್.ಆರ್-54/2015-16/ ದಿನಾಂಕ: 14-11-2018.

***

**ಓದು:**

1. ವಿಜಯಪುರ ತಾಲೂಕಿನ ಶಿವಣಗಿ ಗ್ರಾಮದ ಜಮೀನುಗಳಲ್ಲಿ ಚಿಮ್ಮಲಗಿ ಏತ ನೀರಾವರಿಯ ನಾಗಠಾಣಾ ಶಾಖಾ ಕಾಲುವೆಯಕಿ.ಮೀ.30.000 ರಿಂದ 32.100 ರವರೆಗಿನ ನಿರ್ಮಾಣಕ್ಕಾಗಿ ಸಾರ್ವಜನಿಕ ಉದ್ದೇಶಕ್ಕಾಗಿ ಹಾಗೂ ಭೂಸ್ವಾಧೀನಪಡಿಸಿಕೊಳ್ಳುವ ಉದ್ದೇಶಿತ ಪ್ರಕರಣವು ಸಾಮಾಜಿಕ ಉದ್ದೇಶಗಳಿಗೆ ಪೂರಕವಾಗಿದೆ ಎಂಬುವುದನ್ನು ಅಭಿಪ್ರಾಯ ಹೊಂದಿರುವುದರಿಂದ ಭೂಸ್ವಾಧೀನಕಾಯ್ದೆ 2013 ಕಲಂ 11(1) ರಡಿ ಪ್ರಾಥಮಿಕ ಅಧಿಸೂಚನೆ ಹೊರಡಿಸಲಾಗಿದೆ.
2. ಭೂಸ್ವಾಧೀನಕಾಯ್ದೆ 2013 ಕಲಂ 16 ರ ಉಪ ಕಲಂ 1 ರಿಂದ 6 ರಲ್ಲಿ ವಿಶ್ಲೇಷಿಸಿರುವ ತತ್ವಗಳನ್ನು ಆಧರಿಸಿ ಆಡಳಿತಾಧಿಕಾರಿಗಳು, ಕೃಷ್ಣಾ ಮೇಲ್ದಂಡೆ ಯೋಜನೆ, ಆಲಮಟ್ಟಿರವರು ಬಾಧಿತ/ ಜಮೀನು ಕಳೆದುಕೊಳ್ಳುವ ಕುಟುಂಬಗಳ ಗಣತಿಯನ್ನು ಕೈಗೊಂಡು ಬಾಧಿತ ಕುಟುಂಬಗಳ ಜಮೀನುಗಳ ಮೇಲೆ ಜೀವನ ನಿರ್ವಹಣೆ ಪ್ರಧಾನವಾಗಿ ಅವಲಂಬಿತರಾಗಿರುವಂತಹ ಜಮೀನು ಹಾನಿಗೊಳಗಾಗಿರುವ ಸಂಬಂಧದಲ್ಲಿ ಜೀವನೋಪಾಯಗಳ ವಿವರಗಳನ್ನು ತಯಾರಿಸಿ ಪುನರ್ವಸತಿ& ಪುನರ್‌ವ್ಯವಸ್ಥೆ ಯೋಜನೆಯನ್ನು ಸಿದ್ಧಪಡಿಸಲಾಗಿದೆ.
3. ಭೂಸ್ವಾಧೀನಕಾಯ್ದೆ 2013 ಕಲಂ 17 ಉಪ ಕಲಂ 2 ರಲ್ಲಿ ವಿಶ್ಲೇಷಿಸಿರುವ ತತ್ವಗಳನ್ನು ಆಧರಿಸಿ ಮಹಾ ವ್ಯವಸ್ಥಾಪಕರು, ಪುನರ್ವಸತಿ ಮತ್ತು ಪುನರ್‌ನಿರ್ಮಾಣ, ಕೃಷ್ಣಾ ಮೇಲ್ದಂಡೆ ಯೋಜನೆ, ನವನಗರ, ಬಾಗಲಕೋಟರವರು ಗಣತಿ ಪ್ರಸ್ತಾವನೆಯನ್ನು ಸಲಹೆಗಳೊಂದಿಗೆ ಕರಡು ಪುನರ್ವಸತಿ ಪುನರ್‌ವ್ಯವಸ್ಥೆ ಯೋಜನೆಯನ್ನು ಶಿಫಾರಸ್ಸು ಮಾಡಿರುತ್ತಾರೆ.

..2..

4. ಭೂಸ್ವಾಧೀನಕಾಯ್ದೆ 2013 ಕಲಂ 45 ರಲ್ಲಿ ವಿಶ್ಲೇಷಿಸಿರುವ ತತ್ವಗಳನ್ನು ಆಧರಿಸಿ ಸ್ವಾಧೀನಪಡಿಸಿಕೊಳ್ಳುತ್ತಿರುವ ಕ್ಷೇತ್ರವು 100 ಎಕರೆ ಕ್ಷೇತ್ರಕ್ಕೆ ಒಳಪಡದೇ ಇರುವುದರಿಂದ ಯೋಜನಾ ವ್ಯಾಪ್ತಿಯ ಹಾಗೂ ಪ್ರಾದೇಶಿಕ ವಲಯ ಮಟ್ಟದ ಸಮಿತಿಯನ್ನು ರಚಿಸುವುದು ಅನ್ವಯಿಸುವುದಿಲ್ಲ.
5. ಭೂಸ್ವಾಧೀನಕಾಯ್ದೆ 2013 ಕಲಂ 18 ರಲ್ಲಿ ವಿಶ್ಲೇಷಿಸಿರುವ ತತ್ವಗಳನ್ನು ಆಧರಿಸಿ ಯೋಜನೆಗೆ ಜಮೀನು ಕಳೆದುಕೊಳ್ಳುವ ಕುಟುಂಬಗಳಿಗೆ ಒದಗಿಸಬಹುದಾದ ಪುನರ್ವಸತಿ ಪುನರ್‌ವ್ಯವಸ್ಥೆಯ ಕರಡು ಪ್ರಸ್ತಾವನೆಯನ್ನು ಅನುಮೋದನೆ ನೀಡಿ ಸಾರ್ವಜನಿಕೀಕರಣಗೊಳಿಸಲಾಗಿದೆ.
6. ಉಲ್ಲೇಖ 6 ರಲ್ಲಿ ತಿಳಿಸಿರುವಂತೆ ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಮತ್ತು ನ್ಯಾಯೋಚಿತ ಪರಿಹಾರಕ್ಕೆ ಹಕ್ಕು, ಪುನರ್ವಸತಿ ಮತ್ತು ಪುನರ್‌ವ್ಯವಸ್ಥೆಯ ಅಧಿನಿಯಮ 2013 ಕಲಂ 32 ರಡಿ ಪುನರ್ವಸತಿ ಮತ್ತು ಪುನರ್‌ವ್ಯವಸ್ಥೆ ಬಗ್ಗೆ ಪ್ರತ್ಯೇಕಐತೀರ್ಪುರಚಿಸಬೇಕು, ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಮತ್ತು ನ್ಯಾಯೋಚಿತ ಪರಿಹಾರಕ್ಕೆ ಹಕ್ಕು, ಪುನರ್ವಸತಿ ಮತ್ತು ಪುನರ್‌ವ್ಯವಸ್ಥೆ(ಕರ್ನಾಟಕ) ನಿಯಮಗಳು 2015 ನಿಯಮ 2 (ಸಿ) 30 (8) ಪುನರ್ವಸತಿ ಮತ್ತು ಪುನರ್‌ವ್ಯವಸ್ಥೆಗಳು ಸೇರಿದಂತೆ ಐತೀರ್ಪಿನ ಪರಿಹಾರದ ಮೊತ್ತವು 5 ಕೋಟಿ ರೂಪಾಯಿಗಳಿಗಿಂತ ಕಡಿಮೆ ಇದ್ದರೆ ವಿಶೇಷ ಜಿಲ್ಲಾಧಿಕಾರಿ ಐತೀರ್ಪನ್ನು ಘೋಷಿಸಬೇಕು.
7. ಉಲ್ಲೇಖ 7 ರಲ್ಲಿ ಮಾನ್ಯ ಮಹಾ ವ್ಯವಸ್ಥಾಪಕರು, ಭೂಸ್ವಾಧೀನ ಕೃಮೇಯೋ:ಬಾಗಲಕೋಟ ಇವರು ಕೃಮೇಯೋ:ಪ್ರಕರಣಗಳಲ್ಲಿ ಸರ್ಕಾರದ ಪತ್ರ ಸಂ:ಕಂಇ:22:ಪುನರ್ವಸತಿ/201 ದಿನಾಂಕ22-02-2016 ರನ್ವಯ ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಮತ್ತು ನ್ಯಾಯೋಚಿತ ಪರಿಹಾರಕ್ಕೆ ಹಕ್ಕು, ಪುನರ್ವಸತಿ ಪುನರ್‌ಮಾರ್ಣ, (ಕರ್ನಾಟಕ) ನಿಯಮಗಳು 2015ರ ಪ್ರತಿಯನ್ನು ಲಗತ್ತಿಸಿ ನಿಯಮಾನುಸಾರ ಸೂಕ್ತ ಕ್ರಮ ಕೈಗೊಳ್ಳಲು ತಿಳಿಸಿರುತ್ತಾರೆ.
8. ಮೇಲೆ ಓದು 1 ರಿಂದ 7 ರವರೆಗಿನ ನಿರ್ದಿಷ್ಟ ಪಡಿಸುವಂತಹ ಸಂಗತಿಗಳನ್ನು ಪರಾಮರ್ಶಿಸಿ ವಿಜಯಪುರ ತಾಲ್ಲೂಕಿನ ಶಿವಣಗಿ ಗ್ರಾಮದ ಜಮೀನುಗಳಲ್ಲಿ ಚಿಮ್ಮಲಗಿ ಏತ ನೀರಾವರಿಯ ನಾಗಠಾಣಾ ಶಾಖಾ ಕಾಲುವೆಯ ಕಿ.ಮೀ.30.000 ರಿಂದ 32.100 ರವರೆಗಿನ ನಿರ್ಮಾಣಕ್ಕಾಗಿ 30 ಎಕರೆ 32 ಗುಂ. ಇರುತ್ತದೆ. ಒಟ್ಟು 32 ಕುಟುಂಬಗಳು ಜಮೀನನ್ನು ಕಳೆದುಕೊಳ್ಳುತ್ತಾರೆ. ಸದರೀ ಕುಟುಂಬಗಳಲ್ಲಿ 1 ಕುಟುಂಬ ಹೊರತುಪಡಿಸಿ ಉಳಿದ ಕುಟುಂಬಗಳು ಪ್ರಧಾನ ಜೀವನೋಪಾಯವನ್ನು ಯೋಜನೆಯಿಂದ ನಷ್ಟ ಹೊಂದುವುದಿಲ್ಲ ಎಂಬುದನ್ನು ಪರಿಗಣಿಸಿ ಈ ಕುಟುಂಬಗಳಿಗೆ ಭೂಸ್ವಾಧೀನಕಾಯ್ದೆ 2013 ಕಲಂ 31 ರಲ್ಲಿ ವಿಶ್ಲೇಷಿಸಿರುವ ತತ್ವಗಳನ್ನು ಆಧರಿಸಿ ಯೋಜನೆಗೆ ಜಮೀನು ಕಳೆದುಕೊಳ್ಳುವ ಕುಟುಂಬಗಳಿಗೆ 2ನೇ ಪರಿಶಿಷ್ಟದಲ್ಲಿ ಹೇಳಾದ ತತ್ವಗಳ ಕರಾರಿನ ಮೇರೆಗೆ ಕುಟುಂಬಗಳಿಗೆ ಪುನರ್ವಸತಿ ಪುನರ್‌ವ್ಯವಸ್ಥೆ ಅಗತ್ಯತೆಯನ್ನು ಪರಿಗಣಿಸಲಾಗುವುದಿಲ್ಲ ಎಂಬುದನ್ನು ವಿರ್ಮಶಿಸಿ ಹಾಗೂ ರಿ.ಸ.ನಂ.390/3 ಈ ಕುಟುಂಬವು ಸದರೀ ಜಮೀನಿಂದ ಬರುವ ಆದಾಯದ ಶೇ.50 ಕ್ಕಿಂತ ಹೆಚ್ಚಿಗೆ ಕಳೆದುಕೊಳ್ಳುತ್ತಿರುವುದರಿಂದ ಅವರ ಜೀವನಾಧಾರದ ನಷ್ಟತೆಯನ್ನು ಕಲಂ 31 ರ ಮೇರೆಗೆ ಅನುಸೂಚಿ-31 (2)ರ ಅನುಸಾರ ಅವರಿಗೆ ಪ್ರತಿ ಕುಟುಂಬಕ್ಕೆ ರೂ.5-00 ಲಕ್ಷದಂತೆ ಅನುದಾನ ನಿಗದಿಪಡಿಸಿ, ವಿಮರ್ಶಿ ವಿಶೇಷ ಭೂಸ್ವಾಧೀನಾಧಿಕಾರಿಗಳು, ಕೃಮೇಯೋ:ಇಂಡಿರವರು ಐತೀರ್ಪನ್ನು ರಚಿಸಿ ಅನುಮೋದನೆಗೆ ಸಲ್ಲಿಸಿದ್ದು, ಸದರೀ ಕುಟುಂಬವು ಸ್ವಾಧೀನಕ್ಕೆ ಒಳಪಡುವ ಜಮೀನಿವನ್ನು ಹೊರತುಪಡಿಸಿ ಬೇರೆ ಯಾವುದೇ ರೀತಿಯ ಜೀವನೋಪಾಯಕ್ಕಾಗಿ ಉದ್ಯೋಗ ಅಥವಾ ಇತರ ಆರ್ಥಿಕ ಸಂಪನ್ಮೂಲಗಳನ್ನು ಹೊಂದಿರದೇ ಇರುವ ಬಗ್ಗೆ ಖಚಿತಪಡಿಸಿಕೊಂಡು ಪರಿಹಾರಧನ ವಿತರಿಸಲು ಷರತ್ತಿಗೆ ಒಳಪಟ್ಟು ಅವರ ವೈಯಕ್ತಿಕ ಜವಾಬ್ದಾರಿ ಮೇರೆಗೆ ಈ ಕೆಳಗಿನಂತೆ ಆದೇಶಿಸಲಾಗಿದೆ.

:: ಆ ದೇ ಶ :

ಕ್ರ.ಸಂ:ವಿಜಿಜ:ಭೂಸ್ವಾ-2:ಸಿ.ಆರ್- 26/2018-19/503 ದಿನಾಂಕ:24/11/2018.

**ಪುನರ್ವಸತಿ ಪುನರ್‌ವ್ಯವಸ್ಥೆ ಯೋಜನೆಗಳು ಇಂತಿವೆ**

| | | |
|---|---|---|
| A | ಕುಟುಂಬಗಳಿಗೆ ಪಾವತಿಸಬಹುದಾದ ಪುನರ್ವಸತಿ ಮತ್ತು ಪುನರ್‌ವ್ಯವಸ್ಥೆ ತೀರ್ಪು | ರೂ.5,00,000-00 |
| B | ಪುನರ್ವಸತಿ ಮತ್ತು ಪುನರ್‌ವ್ಯವಸ್ಥೆ ಮೊತ್ತವನ್ನು ವರ್ಗಾಯಿಸಬಹುದಾದ ವ್ಯಕ್ತಿಯ ಬ್ಯಾಂಕ ಖಾತೆಯ ಸೌಲಭ್ಯ | ಭೂಸ್ವಾಧೀನಕಾಯ್ದೆ -2013ರ ಸಾಂಪ್ರದಾಯಿಕ ನೀತಿಯಂತೆ ಬಾಧಿತ ಕುಟುಂಬಗಳಿಗೆ ಬ್ಯಾಂಕ ಖಾತೆಗೆ ವರ್ಗಾಯಿಸುವುದು. |
| C | ಸ್ಥಳಾಂತರಗೊಂಡ ಕುಟುಂಬಗಳ ಪ್ರಕರಣದಲ್ಲಿ ಹಂಚಿಕೆ ಮಾಡಬಹುದಾದ ಮನೆ ನಿವೇಶನ ಮತ್ತು ಮನೆಗಳ ವಿವರಗಳು | ಅನ್ವಯಿಸುವುದಲ್ಲ. |
| D | ಸ್ಥಳಾಂತರಗೊಂಡ ಕುಟುಂಬಗಳಿಗೆ ಹಂಚಿಕೆ ಮಾಡಲಾದ ಭೂಮಿಯ ವಿವರಗಳು. | ಅನ್ವಯಿಸುವುದಲ್ಲ. |
| E | **ಸ್ಥಳಾಂತರಗೊಂಡ ಕುಟುಂಬಗಳ ಪ್ರಕಣದಲ್ಲಿ ಏಕಕಾಲದ ಜೀವನಾಧಾರ ಭತ್ಯೆ ಮತ್ತು ಪ್ರಯಾಣ ಭತ್ಯೆ ವಿವರಗಳು** | |
| | ವಿಶೇಷ ಭೂಸ್ವಧೀನಾಧಿಕಾರಿಗಳು ಕೃಮೇಯೋ: ಇಂಡಿರವರು ತಯಾರಿಸಿರುವ ಪುನರ್ವಸತಿ ಮತ್ತು ಪುನರ್‌ವ್ಯವಸ್ಥೆ ಕರಡು ಐತೀರ್ಪಿನಲ್ಲಿ ಒಟ್ಟು ಸ್ವಾಧೀನಕ್ಕೆ ಒಳಪಟ್ಟಿರುವ ಕ್ಷೇತ್ರ 30 ಎ. 32 ಗುಂ. ಒಟ್ಟು 32 ಕುಟುಂಬಗಳು ಭೂಮಿ ಕಳೆದುಕೊಳ್ಳುತ್ತಿದ್ದು, ಸದರೀ ಕುಟುಂಬಗಳ ಪೈಕಿ 1 ಕುಟುಂಬವನ್ನು ಹೊರತುಪಡಿಸಿ ಅವರು ಹೊಂದಿದ ಒಟ್ಟು ಕ್ಷೇತ್ರದ ಬಹುಪಾಲು ಜಮೀನನ್ನು ಯೋಜನೆಗೆ ಕಳೆದುಕೊಳ್ಳುತ್ತಿರುವುದಿಲ್ಲ ಹಾಗೂ ಅವರು ಪ್ರಧಾನವಾಗಿ ಹೊಂದಿರುವ ಜೀವನಾಧಾರ ನಷ್ಟತೆಯನ್ನು ಈ ಯೋಜನೆಯಿಂದ ಕಳೆದುಕೊಳ್ಳುತ್ತಿರುವುದಿಲ್ಲ ಎಂದು ನಿರ್ದಿಷ್ಟ ಪಡಿಸಿರುತ್ತದೆ. ಈ ಕುಟುಂಬಗಳಿಗೆ ಏಕಕಾಲದ ಜೀವನಾಧಾರ ಅನುದಾನ ಕಲ್ಪಿಸುವುದು ಅಗತ್ಯತೆಯನ್ನು ಪರಿಗಣಿಸಿ ಹಾಗೂ ರಿ.ಸನಂ.390/3 ರ ಕುಟುಂಬ ತಮ್ಮ ಎಲ್ಲಾ ಮೂಲಗಳಿಂದ ಬರುವ ಆದಾಯದ ಶೇ.50 ಕ್ಕಿಂತ ಹೆಚ್ಚಿಗೆ ಕಳೆದುಕೊಳ್ಳುತ್ತಿರುವುದರಿಂದ ಅವರ ಜೀವನಾಧಾರದ ನಷ್ಟತೆಯನ್ನು ಕಲಂ 31 ರ ಮೇರೆಗೆ ಅನುಸೂಚಿ-31 (2)ರ ಅನುಸಾರ ಅವರಿಗೆ ಪ್ರತಿ ಕುಟುಂಬಕ್ಕೆ ರೂ. 5-00 ಲಕ್ಷದಂತೆ ಅನುದಾನ ನಿಗದಿಪಡಿಸಿ ವಿಮರ್ಶಿಸಿ ವಿಶೇಷ ಭೂಸ್ವಾಧೀನಾಧಿಕಾರಿಗಳು, | |